# ಒಡೆದ ಮನಗಳ ನಡುವೆ ಹೊಸತೊಂದು ಗೊಡವೆ!

ವೀರೇಶ ಹುಡುಗಿಯರ ರೀತಿ ರೇಷ್ಮೆ ಲಂಗ, ರವಿಕೆ, ಬಳೆ ತೊಟ್ಟುಕೊಂಡು ಹೆಣ್ಣುಮಕ್ಕಳ ತರಹನೇ ಆಡ್ತಾ ಇರೋದನ್ನು ಕಂಡ ವಾರಿಜಳಿಗೆ ಕೋಪ ನೆತ್ತಿಗೇರಿತ್ತು. ವೀರೇಶ ಹಾಕಿಕೊಂಡಿದ್ದ ಲಂಗ ರವಿಕೆಯನ್ನು ಬಿಚ್ಚಿ ಬರೀ ಚಡ್ಡಿಯಲ್ಲಿದ್ದ ಅವನನ್ನು ಎತ್ತಿಕೊಂಡಳು. ಅವಳ ರೌದ್ರಾವತಾರಕ್ಕೆ ಬೆದರಿ ನಿಂತಿದ್ದ ಹೆಣ್ಣುಮಕ್ಕಳತ್ತ ತಿರುಗಿ, 'ಯಾವಳ್ರೆ ಅವನಿಗೆ ಇಂಗೆ ವೇಷ ಆಕಿದ್ದು, ನಿಮ್ಗೇನು ಮಾಡಾಕೆ ಬೇರೆ ಕೆಮೆ ಇಲ್ವಾ, ಅರೀದ ಉಡ್ಗಂಗೆ ಇಂಗೆಲ್ಲಾ ಮಾಡ್ತಾರಾ. ನೀವೇನ್ ಮನುಸ್ರ, ದೆವ್ವಗಳಾ…' ಎಂದು ಬಿರುಗಣ್ಣು ಬಿಟ್ಟು ನೋಡಿದಳು. ಅವಳಿಗೆ ಹೆದರಿ ನಡುಗಿದ ಲತಾ 'ನಾವಲ್ಲಮ್ಮ ಹಾಕಿದ್ದು, ಮೇನಕಕ್ಕ ಅಪ್ನಿಗೆ ಡ್ರಸ್ಸು ಮಾಡಿದ್ದು ಅಮ್ಮ' ಎಂದು ಹೇಳಿಬಿಟ್ಟಳು.

ಮೇನಕಳತ್ತ ಕೋಪದಿಂದ ನೋಡುತ್ತಾ 'ನಿಂಗ್ಯಾಕವ್ವ ಇದೆಲ್ಲ ಬೇಕು, ನೀವಷ್ಟು ಜನ ಹೆಣ್ಣುಮಕ್ಳು ಇರೋದು ಈ ಮನೆಗೆ ಸಾಲ್ದಾ, ಇರೋ ಒಬ್ಬ ಗಂಡು ಮಗೀನೂ ನಿಮ್ಮಂಗೆ ಆಗಬೇಕು ಅಂತ ಬಯಸ್ತಾ ಇದೀರಾ' ಎಂದು ವ್ಯಂಗ್ಯವಾಗಿ ಮೇನಕಳನ್ನೇ ನೋಡುತ್ತಾ ಕೇಳಿದಳು.

ತಕ್ಷಣವೇ ಮೇನಕ 'ಇಲ್ಲ ಇಲ್ಲ… ನಾನೇನು ಅವನಿಗೆ ಹುಡುಗಿ ಡ್ರಸ್ ಮಾಡ್ಲಿಲ್ಲ ಚಿಕ್ಕಮ್ಮ. ಅವನೇ ನನ್ನತ್ರ ಬಂದು ಹಟ ಮಾಡ್ದಾ. ಬ್ಯಾಡಾ ಅಂತ ಎಷ್ಟು ಏಳಿದ್ರೂ ಕೇಳ್ಲಿಲ್ಲ, ಅಲ್ವೇನೊ ವೀರೂ, ನಾನೇ ನಿನಗೆ ಈ ಡ್ರಸ್ ಹಾಕಿದ್ನಾ, ನೀನೆ ಅಲ್ವಾ ನನ್ನ ಹುಡುಕ್ಕೊಂಡು ಬಂದು ಹಾಕು ಅಂದಿದ್ದು, ನಾಳೆ ನಂಗೆ ಟೆಸ್ಟ್ ಇದೆ ಓದ್ಕೊಬೇಕು ಹೋಗೊ ಅಂದ್ರು ಕೇಳ್ಳಿಲ್ಲ, ಅಳ್ತಾ ಕೂತ್ಕೊಂಡ. ಅದಕ್ಕೆ ಪಾಪ ಅಂತ ಹಾಕಿದೆ' ಎಂದು ಪೆಚ್ಚಾಗಿ ಹೇಳಿದಳು.

'ಅವನು ಕೇಳ್ತಾನೆ ಅಂತ ಹಾಕಿಬಿಡ್ತಿಯಾ, ಅಪ್ನಿಂಗತೂ ಗೊತ್ತಾಗಕಿಲ್ಲ, ನೀನು ದೊಡ್ಡವಳು, ನಿಂಗೂ ಅಷ್ಟೂ ಗೊತ್ತಾಗಕಿಲ್ವಾ. ಮನ್ಗೆ ಹಿರಿಮಗಳು ನೀನು. ಏನು ಮಾಡ್ಬೇಕು, ಏನು ಮಾಡ್ಬಾರ್ದು ಅಂತ ಗೊತ್ತಾಗಕಿಲ್ವಾ, ಅಂಗೆಲ್ಲಾ ಮಾಡ್ಬಾರ್ದು ಅಂತ ಬುದ್ದಿ ಹೇಳೊಕೆ ಆಗ್ಲಿಲ್ವಾ ನಿಂಗೆ, ನಿಮ್ಮಮ್ಮ ಇದ್ನೆಲ್ಲಾ ಹೇಳಿ ಕೊಡ್ಲಿಲ್ವಾ' ಎಂದು ಮತ್ತಷ್ಟು ರೇಗಿದಳು.

ಅಲ್ಲಿವರೆಗೂ ಸುಮ್ಮನೆ ಎಲ್ಲವನ್ನು ನೋಡುತ್ತಾ ನಿಂತಿದ್ದ ಶಾಂಭವಿಗೆ ವಾರಿಜ ಅತಿ ಆಡ್ತಾ ಇದ್ದಾಳೆ ಅಂತ ಅನ್ನಿಸಿತು. ಈ ಸಣ್ಣ ವಿಷಯಕ್ಕೆ ಯಾಕೆ ಇಂಗೆ ಆಡ್ತಾ ಇದ್ದಾಳೆ. ಈಗ ಆಗಿದ್ದು ಆಗಿ ಹೋಗಿದೆ. ಮುಂದೆ ಹಿಂಗಾಡ್ಬೇಡ ಅಂದ್ರೆ ಆತಪ್ಪ. ಅದಕ್ಯಾಕೆ ಇಂಗೆ ಕುಣಿತಾ ಇದ್ದಾಳೆ. ವೀರೂ ಅಂತೂ ಎಂತ ಮುದ್ದುಮುದ್ದಾಗಿ ಕಾಣ್ತಾ ಇದ್ದಾನೆ ಅಂತ ಅಂದ್ಕೊತಾ, 'ವೋಗ್ಲಿ ಬುಡು ವಾರೀ, ಮಕ್ಕಳಲ್ವಾ? ಅವ್ಕೇನು ತಿಳಿತದೆ, ಚೆನ್ನಾಗಿ ಕಾಣ್ತಾನೆ ಅಂತ ಮಾಡವೆ. ಅಪ್ನಿಗೂ ಅಂಗೆ ಮಾಡ್ಕೊಳ್ಳದು ಶ್ಯಾನೆ ಇಷ್ಟ ಅಲ್ವಾ, ಮಗಾ ಆಟಾ ಮಾಡ್ತೈತೆ ಅಂತ ಆಕವೆ, ಇನ್ನಮ್ಯಾಕೆ ಅಂಗೆಲ್ಲ ಮಾಡ್ಬೇಡಾ ಅಂದ್ರಾತು' ಎಂದು ಹಗುರವಾಗಿ ಹೇಳಿದಳು.

'ನಿಮ್ಮ ಮಗಂಗೆ ಅಂಗೆ ಮಾಡದ್ರೆ ಗೊತ್ತಾಗ್ತಿತ್ತು, ಅವನು ನನ್ನ ಮಗಾ. ಗಂಡ್ಮಗ ಬೇಕು ಅಂತ ಬಯ್ಸಿ ಬಯ್ಸಿ ಪಡ್ಕೊಂಡಿದೀನಿ. ಅವನ್ಯಾಕೆ ವುಡ್ಗಿ ತರಾ ವೇಸ ಆಕ್ಕೊಬೇಕು,

